## ನಿಮ್ಮೊಡನೆ

# ಅದ್ದೂರಿ ಆಚರಣೆ, ದುಬಾರಿ ಉಡುಗೊರೆ ಪ್ರೀತಿಯ ಅಭಿವ್ಯಕ್ತಿಗೆ ಮಾನದಂಡಗಳೇ?

ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲ್ಲೂಕಿನ ಹಿರೇಶಿವನಗುತ್ತಿಯ ಮೆಹಬೂಬ್, ಸರ್ಕಾರಿ ಪ್ರೌಢಶಾಲೆಯಲ್ಲಿ 'ಡಿ' ದರ್ಜೆಯ ನೌಕರ. ಒಂದನೇ ತರಗತಿ ವಿದ್ಯಾರ್ಥಿಯಾದ ತಮ್ಮ ಮಗ ಮೊಹಮ್ಮದ್ ಮುಸ್ತಾಫನ ಹುಟ್ಟುಹಬ್ಬವನ್ನು ವಿಭಿನ್ನವಾಗಿ ಆಚರಿಸುವುದು ಹೇಗೆ ಎಂದು ತಲೆಕೆಡಿಸಿಕೊಂಡ ಅವರ ಕಣ್ಣಿಗೆ ಕಾಣಿಸಿದ್ದು ಬಣ್ಣಗೆಟ್ಟಿದ್ದ ಸರ್ಕಾರಿ ಶಾಲೆ. ಶನಿವಾರ ಕೆಲಸ ಮುಗಿಸಿಕೊಂಡು ಹೋಗಿ, ಸೋಮವಾರ ಬೆಳಗ್ಗೆ ಆಗಮಿಸಿದ ಸಿಬ್ಬಂದಿಗೆ ಆಶ್ಚರ್ಯ ಕಾದಿತ್ತು; ಶಾಲಾ ಕಟ್ಟಡ ಹೊಸ ಬಣ್ಣಗಳಿಂದ ಕಂಗೊಳಿಸುತ್ತಿತ್ತು. ಸುಮಾರು ಮೂವತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ಶಾಲೆಗೆ ಬಣ್ಣಬಳಿಸುವ ಮೂಲಕ ತಮ್ಮ ಮಗನ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದ ಖುಷಿ ಮೆಹಬೂಬ್ ಅವರದು. ಅವರ ಕೆಲಸವನ್ನು ಮೆಚ್ಚಿ ಸನ್ಮಾನಿಸಲು ಶಾಲಾಭಿವೃದ್ಧಿ ಸಮಿತಿ ನಿರ್ಧರಿಸಿದೆ. ಮೂರು ವರ್ಷಗಳ ಹಿಂದೆ ಬಂಟ್ವಾಳ ತಾಲ್ಲೂಕಿನಲ್ಲೂ ಇಂಥ ಘಟನೆ ವರದಿಯಾಗಿತ್ತು. ಮಂಚಿ ಕುಕ್ಕಾಜೆಯ ಶಾಲೆಯಲ್ಲಿ ಕಲಿಯುತ್ತಿದ್ದ ಸಲ್ಮಾನ್ ಫಾರಿಸ್ ಎನ್ನುವ ವಿದ್ಯಾರ್ಥಿಯ ತಂದೆ, ಮಗನ ಹುಟ್ಟುಹಬ್ಬಕ್ಕಾಗಿ ತರಗತಿಯ ಕೋಣೆಗೆ ಬಣ್ಣ ಬಳಿಸಿದ್ದರು.

ಶಾಲೆಗೆ ಸುಣ್ಣಬಣ್ಣ ಮಾಡಿಸಿರುವ ಮೆಹಬೂಬ್ ಸಿರಿವಂತರೇನಲ್ಲ. ಅವರ ಕುಟುಂಬ ವಾಸವಿರುವುದು ಬಾಡಿಗೆ ಮನೆಯಲ್ಲಿ. ಪುಟ್ಟ ಮಗ ಮುಸ್ತಾಫನ ಹೃದಯಕ್ಕೆ ಇತ್ತೀಚೆಗಷ್ಟೇ ಚಿಕಿತ್ಸೆಯಾಗಿದೆ. ಹೀಗೆ ವೈಯಕ್ತಿಕ ಬದುಕಿನಲ್ಲಿ ತೊಂದರೆಗಳಿದ್ದರೂ ಹೃದಯವಂತಿಕೆಗೇನೂ ಕೊರತೆಯಾಗಿಲ್ಲ. ಆ ಹೃದಯವಂತಿಕೆಯಿಂದಲೇ ಮಗನ ಹುಟ್ಟುಹಬ್ಬದ ಸಂಭ್ರಮವನ್ನು ಶಾಲೆಯ ಗೋಡೆಗಳಲ್ಲಿ ಕಾಣುವ ಯೋಚನೆ ಅವರಿಗೆ ಬಂದಿದೆ. ಅಪ್ಪನ ಕೆಲಸ ನೋಡಿ ಪುಟಾಣಿ ಬಾಲಕನಿಗೆ ಹೆಮ್ಮೆಯೆನಿಸಿರಬೇಕು.

ಮಕ್ಕಳ ಹುಟ್ಟುಹಬ್ಬಕ್ಕೆ ಸಾವಿರಾರು ರೂಪಾಯಿ ಖರ್ಚು ಮಾಡುವ ಪೋಷಕರು ನಮ್ಮ ನಡುವೆಯಿದ್ದಾರೆ. ಮನೆಯನ್ನು ಸಿಂಗರಿಸುವುದು, ಮಕ್ಕಳಿಗೆ ದುಬಾರಿ ಉಡುಗೊರೆ, ಬರ್ತಡೇ ಪಾರ್ಟಿ, ಬಂಧುಮಿತ್ರರಿಗೆ ಸಿಹಿ ಹಂಚಿಕೆ – ಹೀಗೆ ಹುಟ್ಟುಹಬ್ಬದ ಹೆಸರಿನಲ್ಲಿ ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡುತ್ತಾರೆ. ಹುಟ್ಟುಹಬ್ಬವನ್ನು ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ಆಚರಿಸುವವರೂ ಇದ್ದಾರೆ. ಇದೆಲ್ಲ ಸಂಭ್ರಮ ಸಹಜವಾದುದೇ. ಇಂಥ ಸಂಭ್ರಮ ಅರ್ಥಪೂರ್ಣವಾಗಿರಬೇಕೆಂದು ಬಯಸುವ ಪೋಷಕರು ಇದ್ದಾರೆ. ಅಂಥವರು ಅನಾಥಾಶ್ರಮಗಳ ಮಕ್ಕಳ ಜೊತೆ ತಮ್ಮ ಮಗುವಿನ ಹುಟ್ಟುಹಬ್ಬ ಆಚರಿಸುತ್ತಾರೆ. ಬಡ ಮಕ್ಕಳಿಗೆ ಪುಸ್ತಕ–ಬಟ್ಟೆ ಕೊಡಿಸುವುದು, ಹಸಿದವರಿಗೆ ಊಟ ಹಾಕುವುದು, ಗಿಡ ನೆಡುವುದು – ಇವೆಲ್ಲವೂ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವ ದಾರಿಗಳೇ. ಮೋಜಿನ ಆಚರಣೆ ನೀಡುವ ಸಂತಸಕ್ಕಿಂತಲೂ ಸಾಮಾಜಿಕ ಕಾಳಜಿಯ ಆಚರಣೆ ನೀಡುವ ಸಂತೋಷ ದೊಡ್ಡದು. ಸಂತೋಷದೊಂದಿಗೆ ಆತ್ಮತೃಪ್ತಿಯೂ ಸೇರಿಕೊಳ್ಳುವ ಹುಟ್ಟುಹಬ್ಬದ ಆಚರಣೆಗಳು ಜೀವನದುದ್ದಕ್ಕೂ ನೆನಪಿನಲ್ಲುಳಿಯುವ ವಿಶೇಷಗಳಾಗಿರುತ್ತವೆ.

ಆರ್ಥಿಕವಾಗಿ ಅಷ್ಟೇನೂ ಸುಸ್ಥಿತಿಯಲ್ಲಿ ಇಲ್ಲದಿರುವ ಮೆಹಬೂಬ್ ಅಂಥವರು ಮಕ್ಕಳ ಹುಟ್ಟುಹಬ್ಬವನ್ನು ಸಾಮಾಜಿಕ ಕಾಳಜಿಯ ರೂಪದಲ್ಲಿ ಆಚರಿಸುವುದಕ್ಕೆ ವಿಶೇಷ ಮಹತ್ವವಿದೆ. ಇಂಥ ಆಚರಣೆಗಳು ಇತರರಿಗೆ ಮಾದರಿಯಾಗುವುದರ ಜೊತೆಗೆ, ಮಕ್ಕಳ ಮನಸ್ಸಿನ ಮೇಲೂ ಪರಿಣಾಮ ಬೀರಬಲ್ಲವು. ಹುಟ್ಟುಹಬ್ಬದ ಸಂದರ್ಭದಲ್ಲಿ ಮಕ್ಕಳನ್ನು ಖುಷಿಪಡಿಸಲಿಕ್ಕಾಗಿ ಮಾಡುವ ಅನಗತ್ಯ ಖರ್ಚುಗಳು ಮಕ್ಕಳ ಮನಸ್ಸಿನಲ್ಲಿ ಹುಸಿ ಸಂಭ್ರಮವನ್ನು ತುಂಬುವ ಸಾಧ್ಯತೆಯಿದೆ. ಹೆಚ್ಚು ದುಡ್ಡು ಖರ್ಚು ಮಾಡಿದಷ್ಟೂ, ದುಬಾರಿ ಉಡುಗೊರೆ ನೀಡಿದಷ್ಟೂ ಹುಟ್ಟುಹಬ್ಬದ ಸಂಭ್ರಮವೂ ಹೆಚ್ಚುತ್ತದೆ ಎನ್ನುವ ಮನೋಭಾವ ಮಕ್ಕಳಲ್ಲಿ ಬೆಳೆಯುತ್ತದೆ. ಇಂಥ ಆಚರಣೆಗಳು ಓರಗೆಯ ಮಕ್ಕಳ ನಡುವೆ ಅಂತರ ಉಂಟಾಗಲು ಕಾರಣವಾಗುತ್ತವೆ. ಕೆಲವರ ಹುಟ್ಟುಹಬ್ಬದ ಆಚರಣೆಗಳು ಆರ್ಥಿಕ ಶಕ್ತಿಯ ಪ್ರದರ್ಶನದ ರೂಪದಲ್ಲೂ ಇರುತ್ತವೆ. ಅದ್ದೂರಿ ಆಚರಣೆಗಳು ಮತ್ತು ಉಡುಗೊರೆಗಳ ಮೂಲಕ ಪ್ರೀತಿಯನ್ನು ಸಾರ್ವಜನಿಕವಾಗಿ ಅಭಿವ್ಯಕ್ತಿಸುವ ವಿಧಾನ ಅನಾರೋಗ್ಯಕರವಾದುದು. ಹುಟ್ಟುಹಬ್ಬ, ಪೂಜೆ, ಮದುವೆಗಳಂತಹ ಯಾವುದೇ ಆಚರಣೆ ಮತ್ತೊಬ್ಬರ ಕಣ್ಣು ಕುಕ್ಕುವಂತಾಗಬಾರದು. ಅವುಗಳ ಸೌಂದರ್ಯ ಇರುವುದು ಸರಳತೆಯಲ್ಲಿ ಹಾಗೂ ಆಚರಣೆಯ ಹಿಂದಿನ ಪ್ರೀತಿ–ಬದ್ಧತೆಯಲ್ಲೇ ಹೊರತು ಅದ್ದೂರಿತದಲ್ಲಿ ಅಲ್ಲ.

ವೈಯಕ್ತಿಕ ಸಂಭ್ರಮ ಸಾರ್ವಜನಿಕ ಸಂಭ್ರಮವೂ ಆದಾಗ, ಅದರ ಸ್ವಾದ ಹೆಚ್ಚುತ್ತದೆ. ಹಂಚಿಕೊಂಡಷ್ಟೂ ಸಂತೋಷ ಹೆಚ್ಚುತ್ತದೆ. ಸಮಾಜದೊಂದಿಗೆ ಮಕ್ಕಳು ಗುರ್ತಿಸಿಕೊಳ್ಳಲು ಅಥವಾ ಮಕ್ಕಳಲ್ಲಿ ಸಾಮಾಜಿಕ ಬದ್ಧತೆ ಮೂಡಿಸಲು ಅವರ ಹುಟ್ಟುಹಬ್ಬದ ಆಚರಣೆ ಸುಂದರ ಕಾರಣವಾಗಬಲ್ಲದು. ಕೊರೊನಾ ವೈರಾಣು ಉಂಟುಮಾಡಿರುವ ಬಿಕ್ಕಟ್ಟಿನ ಸಂದರ್ಭವಂತೂ ಹಬ್ಬ, ಮದುವೆ, ಪೂಜೆಗಳಂತಹ ಕಾರ್ಯಕ್ರಮಗಳು ಹೆಚ್ಚು ಸರಳವಾಗುವುದು ಹಾಗೂ ಜನರಪರವಾಗುವುದು ಅಗತ್ಯ.

■ ರಘುನಾಥ ಚ.ಹ.

ಹುಟ್ಟುಹಬ್ಬದ ಸಂದರ್ಭದಲ್ಲಿ ಮಕ್ಕಳನ್ನು ಖುಷಿಪಡಿಸಲಿಕ್ಕಾಗಿ ಮಾಡುವ ಅನಗತ್ಯ ಖರ್ಚುಗಳು ಮಕ್ಕಳ ಮನಸ್ಸಿನಲ್ಲಿ ಹುಸಿ ಸಂಭ್ರಮವನ್ನು ತುಂಬುತ್ತವೆ. ಹೆಚ್ಚು ದುಡ್ಡು ಖರ್ಚು ಮಾಡಿದಷ್ಟೂ, ದುಬಾರಿ ಉಡುಗೊರೆ ನೀಡಿದಷ್ಟೂ ಹುಟ್ಟುಹಬ್ಬದ ಸಂಭ್ರಮವೂ ಹೆಚ್ಚುತ್ತದೆ ಎನ್ನುವ ಮನೋಭಾವ ಸರಿಯಲ್ಲ.



ಈಶ್ವರ್